ಸಾಕ್ಷಿಗೆ ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ - ಶ್ರೀ ಕೆ ಎಲ್ ಎನ್ ವಾದಿ ಪರ ವಕೀಲರಿಂದಃ

ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿದ್ದು ಅದರಲ್ಲಿ ಕಂಡುಬರುವ ರುಜುಗಳು ನನ್ನದೇ ಆಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ವಾದಿ ಹಾಗೂ ಪ್ರತಿವಾದಿಯರು ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡುವ ಮತ್ತು ಕೊಂಡುಕೊಳ್ಳುವ ಇಚ್ಚೆಯನ್ನು ವ್ಯಕ್ತಪಡಿಸಿದ್ದು ದಾವಾ ಅನುಸೂಚಿ ಸ್ವತ್ತಾದ ಹೊನ್ನೇನಹಳ್ಳಿ ಕಾವಲು ಸರ್ವೆ ನಂ. 17 ವಿಸ್ತೀರ್ಣ 04 ಎಕರೆ 00 ಗುಂಟೆ ಜಮೀನಿನ ಪಹಣಿ ಪತ್ರಿಕೆ ಮತ್ತು ಎಂ ಆರ್ ನಂ. ಹೆಚ್ 7 2014-15 ದೃಢೀಕೃತ ಪ್ರತಿಯನ್ನು, ಹಾಜರುಪಡಿಸಿದ್ದು ಅದರ ಪ್ರಕಾರ ನಾನು ದಿನಾಂಕಃ 20-04-2016 ರಂದು ಸ್ವಾಧೀನ ರಹಿತ ಕ್ರಯದ ಕರಾರು ಪತ್ರ ವನ್ನು ಬರೆದಿರುತ್ತೇನೆ ಉಭಯಪಕ್ಷಗಾರರು ಮತ್ತು ಸಾಕ್ಷಿದಾರರು ಉಪನೊಂದಣಾಧಿಕಾರಿಗಳು, ಬೇಲೂರು ಇವರ ಮುಂದೆ ಸಹಿ ಮಾಡಿದ ನಂತರ ಸದರಿ ದಾಖಲೆಯನ್ನು ನೊಂದಾವಣಿ ಮಾಡಿಸಲಾಗಿದೆ. ಆ ದಾಖಲೆಯನ್ನು ಈಗಾಗಲೇ ನಿಪಿ-3 ಎಂದು ಗುರ್ತಿಸಲಾಗಿದೆ. ವಾದಿಯ ಸಹಿಯನ್ನು ನಿಪಿ-3(ಎ), 2 ನೇ ಪ್ರತಿವಾದಿ ಧರ್ಮರಾಜು ಇವರ ಸಹಿಯನ್ನು ನಿಪಿ-3(ಬಿ), 3 ನೇ ಪ್ರತಿವಾದಿಯಾದ ಯಶೋಧ ಇವರ ಸಹಿಯನ್ನು ನಿಪಿ-3(ಸಿ), ಸಾಕ್ಷಿದಾರರಾದ ರುದ್ರಯ್ಯ ಮತ್ತು ಮಹೇಶ ಇವರುಗಳ ಸಹಿಯನ್ನು ಕ್ರಮವಾಗಿ ನಿಪಿ3(ಡಿ) ಮತ್ತು ನಿಪಿ-3(ಇ) ಎಂದು ಈಗಾಗಲೇ ಗುರ್ತಿಸಲಾಗಿದೆ. ನನ್ನ ಸಹಿಯನ್ನು ನಿಪಿ-3(ಎಫ್) ಎಂದು ಈಗಾಗಲೇ ಗುರ್ತಿಸಲಾಗಿದೆ. ಸದರಿ ದಾಖಲೆಗೆ 1 ನೇ ಪ್ರತಿವಾದಿಯಾದ ಜವರಮ್ಮ ಕೊಂ ಪುಟ್ಟಯ್ಯ ಇವರು ಹೆಬ್ಬೆಟ್ಟಿನ ರುಜು ಮಾಡಿದ್ದು ಆ ರುಜುವನ್ನು ಉಪನೊಂದಣಾಧಿಕಾರಿಗಳ ಮುಂದೆ ನನ್ನ ಸಮಕ್ಷಮದಲ್ಲಿ ಮಾಡಲಾಗಿದ್ದು ಆ ಹೆಬ್ಬೆಟ್ಟಿನ ರುಜುವನ್ನು ನಾನೇ ಗುರ್ತಿಸಿರುತ್ತೇನೆ. ಸದರಿ ಸಹಿಯನ್ನು ನಿಪಿ-3(ಜಿ) ಎಂದು ಗುರ್ತಿಸಲಾಯಿತು.

ಪಾಟೀ ಸವಾಲುಃ

ಏಕಪಕ್ಷೀಯ

(ಉಕ್ತಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣ ಯಂತ್ರದ ಮೂಲಕ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಒ

(ಶಶಿಧರ ಎಂ. ಗೌಡ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.

ಬೇಲೂರು.